ಈಗ ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ):– ಸನ್ಮಾನ್ಯ ಅಧ್ಯಕ್ಷರೇ, ಈ ಮಂಡಳಿಯ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಕಳಿಸಿದ್ದು, ಅದರಲ್ಲಿ ಎರಡು ಪ್ರಕರಣಗಳಿಗೆ ಮಾತ್ರ ಅನುದಾನರಹಿತ ಅನುಮೋದನೆಯನ್ನು ಈಗಾಗಲೇ ಸರ್ಕಾರ ಕೊಟ್ಟಿದೆ, ಬಾಕಿ ಇರುವುದಕ್ಕೆ ಅನುಮೋದನೆಯನ್ನು ಕೊಡದೇ ಇರಲು ಕಾರಣವೇನು ? ಅಲ್ಲದೆ 1988ನೇ ಸಾಲಿನಿಂದ ಕೆಲಸವನ್ನು ಮಾಡಿಕೊಂಡಿರುವುದಕ್ಕೆ ಕಾರ್ಮಿಕ ನೀತಿಗೆ ವಿರೋಧವಾಗಿರುವಂಥ ಆಡಳಿತದ ಮಂಜೂರಾತಿಯನ್ನು ಕೊಟ್ಟಿರುವುದಕ್ಕೆ ಕಾರಣವೇನು ? ಸಂಬಳ ಇಲ್ಲದೆ ಎಷ್ಟು ವರ್ಷ ಕೆಲಸ ಮಾಡಬಹುದು ಎಂಬುದನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುವೆ.

ಡಾ॥ ಹೆಚ್.ಡಿ. ಲಮಾಣಿ:– ಜೋಸೆಫ್ ಕಾನ್ವೆಂಟ್ ಪ್ರೌಢಶಾಲೆಗೆ ಗುಮಾಸ್ತ ಸಹಿತ ಗ್ರಂಥಪಾಲಕರ ಹುದ್ದೆಯನ್ನು ಅನುದಾನರಹಿತವಾಗಿ ಮಂಜೂರು ಮಾಡಲಾಗಿತ್ತು. ಆರ್ಥಿಕ ಮಿತವ್ಯಯದ ದೃಷ್ಟಿಯಿಂದ ಇದುವರೆಗೂ ಅವರಿಗೆ ಗ್ರ್ಯಾಂಟ್ಸ್‌ನ್ನು ಕೊಟ್ಟಿಲ್ಲ. ಏಕೆಂದರೆ ಇದು ನಾನ್ ಟೀಚಿಂಗ್ ಪೋಸ್ಟ್. ಆರ್ಥಿಕ ಮಿತವ್ಯಯವನ್ನು ತೆಗೆದು ಹಾಕಿದ ಮೇಲೆ ನಾವು ಇದನ್ನು ಗ್ರ್ಯಾಂಟ್ ಸಹಿತ ಮಂಜೂರು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಯು.ಕೆ. ಶಾಮಣ್ಣ:– ಎಲ್ಲಾ ಫೀಸಿಬಿಲಿಟಿಯನ್ನೂ ಹೊಂದಿರತಕ್ಕವುಗಳಲ್ಲಿ ಕೇವಲ ಎರಡಕ್ಕೆ ಮಾತ್ರ ಕೊಡದೇ ಇರುವುದಕ್ಕೆ ಕಾರಣವೇನು ? ಈಗಾಗಲೇ 5 ವರ್ಷಗಳಿಂದ ಅವರು ಸತತವಾಗಿ ಕೆಲಸ ಮಾಡುತ್ತಿದ್ದಾರೆ. ಸಂಬಳವಿಲ್ಲದೆ ಕೆಲಸ ಮಾಡತಕ್ಕದ್ದು ಬಹಳ ಕಷ್ಟವಾದ್ದರಿಂದ ಇದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್.ಡಿ. ಲಮಾಣಿ:– ಆದಷ್ಟು ಬೇಗ ಅನುದಾನ ಕೊಡುವಂಥ ವ್ಯವಸ್ಥೆಯನ್ನು ಮಾಡಲು ಪ್ರಯತ್ನಿಸುತ್ತೇನೆ.

ಚುಕ್ಕೆ.ಪ್ರಶ್ನೆ 404

ಪ್ರೊ ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಸಭಾಧ್ಯಕ್ಷರೆ.....

ಶ್ರೀ ಎಂ.ಪಿ. ಕೇಶವಮೂರ್ತಿ:– ಈ ಪ್ರಶ್ನೆ ನಮಗೆ ಸಂಬಂಧಪಡದೇ ಇರುವುದರಿಂದ ಇದನ್ನು ಎಕ್ಸೈಜ್ ಇಲಾಖೆಗೆ ವರ್ಗಾವಣೆ ಮಾಡಿದ್ದೇವೆ. ಈಚಲು ವನದ ವಿಚಾರ ಫೈನಾನ್ಸ್ ಅಂಡ್ ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿದ್ದರಿಂದ ಅದನ್ನು ಎಕ್ಸೈಸ್ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ನಮ್ಮ ಅರಣ್ಯ ಇಲಾಖೆಗೆ ಬರುವುದಿಲ್ಲ.

ಅಧ್ಯಕ್ಷರು:– ಈ ವಿಚಾರವನ್ನು ನಮಗೆ ತಿಳಿಸಬೇಕಲ್ಲವೆ ?

ಶ್ರೀ ಎಂ.ಪಿ.ಕೇಶವಮೂರ್ತಿ:– ತಮಗೆ ತಿಳಿಸಿದ್ದಾರಂತೆ.

ಪ್ರೊ.. ಎಂ.ಡಿ. ನಂಜುಂಡಸ್ವಾಮಿ:– ಸ್ವಾಮಿ, ನಾನು ಕೇಳಿರತಕ್ಕದ್ದು ತುಮಕೂರು ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ಬೆಳೆಯಲಾಗುತ್ತಿರುವ ಈಚಲು ವನಗಳ ಸಂಖ್ಯೆ ಎಷ್ಟು ? ಬೇರೆ ಜಿಲ್ಲೆಗಳಲ್ಲೂ ಈಚಲು ವನಗಳನ್ನು ಸರ್ಕಾರ ಬೆಳೆಸುತ್ತಿದೆಯೇ ? ಈಚಲು ವನವನ್ನು ಬೆಳೆಸುವವರು ತೋಟಗಾರಿಕೆ ಇಲಾಖೆಯವರು ಇಲ್ಲವೇ ಅರಣ್ಯ ಇಲಾಖೆಯವರು. ಈಚಲು ಮತ್ತು ಎಕ್ಸೈಜ್‌ಗೆ ಸಂಬಂಧ ಇದೆ ಎಂಬುದು ನನಗೆ ಗೊತ್ತಿದೆ. ತುಮಕೂರು ಜಿಲ್ಲೆಯಲ್ಲಿ 2-3ವರ್ಷದ ಸಸಿಗಳನ್ನು ರಾಜ್ಯಸರ್ಕಾರದವರು

ಹಾಕಿ ಬೆಳೆಸುತ್ತಿದ್ದಾರೆ. ಬೇರೆ ಜಿಲ್ಲೆಗಳಲ್ಲೂ ಎಷ್ಟು ಬೆಳೆಸುತ್ತಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ ಅಷ್ಟೆ.

ಅಧ್ಯಕ್ಷರು:– ತಮ್ಮ ಪ್ರಶ್ನೆಯನ್ನು ನಾನು ತಡೆಹಿಡಿಯುತ್ತೇನೆ. ಏಕೆಂದರೆ ಅದನ್ನು ಬೇರೆ ಇಲಾಖೆಗೆ ವರ್ಗಾಯಿಸಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾವು ಬೃಂದಾವನ ಎಂದರೆ ಮಾನ್ಯ ಕೃಷ್ಣಾರವರಿಗೆ ಅರ್ಥವಾಗುತ್ತದೆ. ಮಧುವನ ಎಂದರೆ ಅರ್ಥವಾಗುತ್ತದೆ. ಆದರೆ ಈಚಲುವನ ಎಂದರೆ ಏನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಈ ಈಚಲುವನ ಯಾವಾಗ, ಯಾರ ಕಾಲದಲ್ಲಿ ಪ್ರಾರಂಭವಾಯಿತೆಂಬುದು ನನಗೆ ಗೊತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈಚಲುವನ ಪ್ರಾರಂಭವಾಯಿತು. ಈಗ ನಾವು ಅರ್ಧ ಕಿತ್ತುಹಾಕಿದ್ದೇವೆ. ಇನ್ನು ಅರ್ಧ ಕಿತ್ತು ಹಾಕೋಣವೇ ? ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಪರವಾನಗಿಯನ್ನು ಕೊಟ್ಟರೆ ನಾವು ಆ ಕೆಲಸವನ್ನು ಮಾಡುತ್ತೇವೆ. ನಾವು ಗಾಂಧೀಜಿಯವರ ಫೋಟೋವನ್ನು ಇಲ್ಲಿ ಹಾಕಿಕೊಂಡಿದ್ದೇವೆ. ನನ್ನ ಪ್ರಶ್ನೆಗೆ ಉತ್ತರ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ ಪ್ರಶ್ನೆಯನ್ನು ಎಕ್ಸೈಸ್ ಇಲಾಖೆಗೆ ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತೇನೆ; ಫೋಟೋವನ್ನು ತೆಗೆಯಿರಿ, ಇಲ್ಲದಿದ್ದರೆ ಈಚಲು ಗಿಡವನ್ನಾದರೂ ತೆಗೆಯಿರಿ. ಎರಡರಲ್ಲಿ ಒಂದನ್ನು ತೆಗೆಯಿರಿ.

ಅಧ್ಯಕ್ಷರು:– ಪಟ್ಟಣ ಶೆಟ್ಟಿಯವರೆ, ತಮ್ಮ ಚುಪ್ರ 2099ಕ್ಕೆ ಮಾನ್ಯ ಮಂತ್ರಿಗಳು 7 ದಿವಸ ಕಾಲಾವಕಾಶ ಕೇಳಿದ್ದಾರೆ.

ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಆಧುನೀಕರಣಗೊಳಿಸುವ ಬಗ್ಗೆ

1702: ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):–

ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದ ಚಿಗಟೇರಿ ಜನರಲ್ ಆಸ್ಪತ್ರೆಯ ಆಧುನೀಕರಣಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ;

ಆ) ಇದ್ದಲ್ಲಿ, ಆ ಕಾರ್ಯಕ್ರಮಗಳ ವಿವರ ನೀಡುವುದು ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) 1.ದಾವಣಗೆರೆ ಚಿಗಟೇರಿ ಜನರಲ್ ಆಸ್ಪತ್ರೆಯ ಆಧುನೀಕರಣಕ್ಕೆ ಈ ವರ್ಷದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಅ. ಶೈತ್ಯೀಕರಣಗೊಳಿಸಿದ ಶವಾಗಾರದ ಉಪಕರಣವನ್ನು ರಿಪೇರಿ ಮಾಡಲು ರೂ. 18,500–00 ಗಳನ್ನು ವೆಚ್ಚ ಮಾಡಲಾಗುತ್ತಿದೆ.

ಆ. ಐ.ವಿ. ದ್ರಾವಣ ತಯಾರಿಕಾ ಘಟಕಕ್ಕೆ ಅಭಿವೃದ್ಧಿಗೋಸ್ಕರ ರೂ. 1,65,000–00 ಗಳನ್ನು ವೆಚ್ಚ ಮಾಡಲಾಗುತ್ತಿದೆ.

ಇ. ಹೆಂಗಸರ ಮತ್ತು ಮಕ್ಕಳ ವಿಭಾಗದ ಅಭಿವೃದ್ಧಿಗೋಸ್ಕರ ರೂ. 1.00 ಲಕ್ಷಗಳನ್ನು ವೆಚ್ಚ ಮಾಡಲಾಗುತ್ತಿದೆ.